## ಪಡಿತರ ವಿತರಕರ ಪ್ರತಿಭಟನೆ ನವೆಂಬರ್ 9ಕ್ಕೆ ಮುಂದೂಡಿಕೆ

**ಬೆಂಗಳೂರು:** ಅನ್ನಭಾಗ್ಯ ಯೋಜನೆಯಲ್ಲಿ ಕಾರ್ಡುದಾರರಿಗೆ ಹಣ ಬದಲು ಅಕ್ಕಿ ನೀಡುವುದು ಸೇರಿದಂತೆ ವಿವಿಧ ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ ರಾಜ್ಯ ಸರಕಾರಿ ಪಡಿತರ ವಿತರಕರ ಸಂಘ ನ.7ಕ್ಕೆ ಕರೆ ನೀಡಿದ್ದ ಪ್ರತಿಭಟನೆಯನ್ನು ನ.9ಕ್ಕೆ ಮುಂದೂಡಿದೆ.



ರಾಜ್ಯಾದ್ಯಂತ ಈಗಾಗಲೇ ರೇಷನ್ ಎತ್ತುವಳಿ ಸ್ಥಗಿತಗೊಳಿಸಲಾಗಿದೆ. ಆಹಾರ ಇಲಾಖೆ ಸಚಿವರು, ಅಧಿಕಾರಿಗಳ ಜತೆ ಮೂರ್ನಾಲ್ಕು ಬಾರಿ ಸಭೆ ನಡೆದರೂ ನಮ್ಮ ಸಮಸ್ಯೆ ಈಡೇರಿಲ್ಲ. ಹೀಗಾಗಿ, ಸಿಎಂ ಸಿದ್ದರಾಮಯ್ಯ ಅವರು ಮಧ್ಯ ಪ್ರವೇಶಿಸಿ ಜ್ವಲಂತವಾಗಿ ಕಾಡುತ್ತಿರುವ ಸಮಸ್ಯೆಗಳನ್ನು ಬಗೆಹರಿಸಬೇಕು. ಸರಕಾರ, ಕಾರ್ಡುದಾರರಿಗೆ ಹಣ ಬದಲು ಅಕ್ಕಿ ನೀಡಬೇಕು. ಪಡಿತರ ವಿತರಣೆಗೆ ನೀಡಲಾಗುವ ಕಮಿಷನ್ ಹಣ ಹೆಚ್ಚಿಸಬೇಕು. 2022ರಲ್ಲಿ ಕೇಂದ್ರ ಸರಕಾರ ನಿಗದಿಪಡಿಸಿದ್ದ ಕಮಿಷನ್ ಹಣ ಬಿಡುಗಡೆ ಆಗಬೇಕು. ಪಡಿತರ ಸೋರಿಕೆ ತಡೆಗೆ ಸಗಟು ಮಳಿಗೆಗಳಲ್ಲಿ ಎಲೆಕ್ಟ್ರಾನಿಕ್ ಆಧಾರಿತ ತೂಕದ ಯಂತ್ರ ಅಳವಡಿಸಬೇಕು. ಮುದ್ರಿತ ರಸೀದಿ ನೀಡುವಂತೆ ಹೊರಡಿಸಿರುವ ಆದೇಶವನ್ನು ತಕ್ಷಣ ವಾಪಸ್ ಪಡೆಯಬೇಕು ಎಂದು ಕೃಷ್ಣಪ್ಪ ಹೇಳಿದರು.



ಭಾರತೀಯ ಮೂಲದ ಬ್ರಿಟನ್‌ನ ಹಿರಿಯ ರಾಜಕಾರಣಿ ಹಾಗೂ ಲಂಡನ್ ಮೇಯರ್ ಅಭ್ಯರ್ಥಿ ತರುಣ್ ಗುಲಾಟಿ ಅವರನ್ನು ಚಾಂಪಿಯನ್ಸ್ ಗ್ರೂಪ್‌ನಿಂದ ಸನ್ಮಾನಿಸಲಾಯಿತು.

## ಜ್ಞಾನಾರ್ಜನೆಯೊಂದಿಗೆ ಮೌಲ್ಯ ಅಳವಡಿಸಿಕೊಳ್ಳಿ

**ಬೆಂಗಳೂರು:** ಜ್ಞಾನಾರ್ಜನೆಯೊಂದಿಗೆ ಮೌಲ್ಯಗಳ ನ್ನು ರೂಢಿಸಿಕೊಂಡಾಗ ಮಾತ್ರ ಶಿಕ್ಷಣ ಸಂಪನ್ನ ವಾಗುತ್ತದೆ. ಮೌಲ್ಯ ರಹಿತ ಶಿಕ್ಷಣ ಎಂದಿಗೂ ಅಪೂರ್ಣ ಎಂದು ಸಿಎಸ್‌ಐಆರ್ ಹಾಗೂ ಸಿಎಫ್ ಟಿಆರ್‌ಐ ನಿರ್ದೇಶಕಿ ಡಾ.ಶ್ರೀದೇವಿ ಅನ್ನಪೂರ್ಣ ಸಿಂಗ್ ಹೇಳಿದರು. ಪದ್ಮಶ್ರೀ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್ ಮೆಂಟ್ ಅಂಡ್ ಸೈನ್ಸ್ ಸಂಸ್ಥೆಯ 18ನೇ ಘಟಿಕೋತ್ಸವದಲ್ಲಿ ಮಾತನಾಡಿದ ಅವರು, ದೇಶವು ಇಂದು ಹಲವು ಸಾಮಾಜಿಕ ಸಮಸ್ಯೆ, ಹವಾಮಾನ ವೈಪರೀತ್ಯದಂತಹ ಹತ್ತು ಹಲವಾರು ಸಮಸ್ಯೆ ಎದುರಿಸುತ್ತಿದೆ. ಶಿಕ್ಷಿತರು ಕೇವಲ ವೈಯಕ್ತಿಕ ಲಾಲಸೆಗೆ ಒಳಗಾಗದೆ ಸಮಾಜದ ಅಭಿವೃದ್ಧಿಗೂ ಪೂರಕವಾಗಿ ಶ್ರಮಿಸಬೇಕಿದೆ. ಇಂತಹ ಮನಃಸ್ಥಿತಿಯನ್ನು ಶೈಕ್ಷಣಿಕ ಅವಧಿಯ ಆರಂಭದಲ್ಲಿಯೇ ಮಕ್ಕಳಲ್ಲಿ ಜಾಗೃತಗೊಳಿಸುವ ಅಗತ್ಯತೆ ಇದೆ ಎಂದು ಹೇಳಿದರು. ಶಾಸಕ ಡಾ.ಅಶ್ವತ್ಥನಾರಾಯಣ ಮಾತ ನಾಡಿ, ಪ್ರತಿಯೊಬ್ಬರ ಜೀವನದಲ್ಲಿ ವಿದ್ಯಾಭ್ಯಾಸದ ಅವಧಿ ಅತ್ಯಂತ ಮಹತ್ವ ಪೂರ್ಣವಾಗಿದೆ. ಈ ಅವಧಿಯನ್ನು ಅರ್ಥಪೂರ್ಣವಾಗಿ ಬಳಸಿಕೊಂಡರೆ ಯಶಸ್ಸು ನಮ್ಮದಾಗುತ್ತದೆ. ಪದ್ಮಶ್ರೀ ವಿದ್ಯಾಸಂಸ್ಥೆ ಶೈಕ್ಷಣಿಕ ರಂಗದಲ್ಲಿ ಅನುಪಮ ಸೇವೆ ಮಾಡುತ್ತಿದ್ದು, ತನ್ಮೂಲಕ ಸಮಾಜದ ಬೆಳವಣಿಗೆಗೆ ಕೊಡುಗೆ ನೀಡುತ್ತಿದೆ ಎಂದು ಶ್ಲಾಘಿಸಿದರು.

## ಸಮಾಚಾರ ಸಣ್ಣದಲ್ಲ

### ಕೆನರಾ ಸ್ಟಾರ್ಟಪ್ ಯೋಜನೆ ಜಾರಿ

**ಬೆಂಗಳೂರು:** ಕೆನರಾ ಬ್ಯಾಂಕ್ ವತಿಯಿಂದ 'ಕೆನರಾ ಸ್ಟಾರ್ಟಪ್ ಯೋಜನೆ'ಯ ಜಾರಿಗೊಳಿಸಿದ್ದು, ಅತಿ ಸಣ್ಣ, ಸಣ್ಣ ಹಾಗೂ ಮಧ್ಯಮ ಪ್ರಮಾಣದ(ಎಂಎಸ್ ಎಂಇ)ಘಟಕಗಳ ಸ್ಥಾಪನೆಗೆ ಸಾಲ ಸೌಲಭ್ಯ ಒದಗಿಸಲಿದೆ. ಹೈದರಾಬಾದ್, ಬೆಂಗಳೂರು, ಚೆನ್ನೈ, ದೆಹಲಿ, ಹೈದರಾಬಾದ್, ಮುಂಬೈ ಮತ್ತು ಪುಣೆಯಲ್ಲಿ ಸ್ಟಾರ್ಟಪ್ ಶಾಖೆಗಳನ್ನು ಪ್ರಾರಂಭಿಸಲಾಗಿದೆ. ಹತ್ತು ವರ್ಷಗಳ ಅವಧಿಯವರೆಗೆ ಘಟಕಗಳಿಗೆ ಸ್ಟಾರ್ಟಪ್ ಒಪ್ಪಂದ ಅವಧಿಯಾಗಿರುತ್ತದೆ. ಯಾವುದಾದರೂ ಘಟಕದ ಸಂಯೋಜನೆ, ನೋಂದಣಿ, ವಹಿವಾಟು ಆರಂಭವಾದ ದಿನದಿಂದ ಸಾಲ ಸೌಲಭ್ಯ ನೀಡಲಾಗುತ್ತದೆ. ಉತ್ಪನ್ನಗಳು ಅಥವಾ ಸೇವೆಗಳ ಸುಧಾರಣೆ ಆಗಿದ್ದರೆ ಹೆಚ್ಚಿನ ಸೌಲಭ್ಯಗಳನ್ನು ಒಳಗೊಳ್ಳಲಿದೆ. ಉದ್ಯೋಗ ಸೃಷ್ಟಿ ಅಥವಾ ಸಂಪತ್ತು ಸೃಷ್ಟಿಸುವ ವಿನೂತನ ಯೋಜನೆಯಾಗಿದೆ. 10 ಲಕ್ಷಕ್ಕಿಂತ ಹೆಚ್ಚಿನ ಮೊತ್ತದ ಕನಿಷ್ಠ ಸಾಲದ ಅವಧಿಯ ಸಾಲ ಮತ್ತು ಕನಿಷ್ಠ 20% ಮಾರ್ಜಿನ್‌ನೊಂದಿಗೆ ಗರಿಷ್ಠ 10 ಕೋಟಿ ರು.ವರೆಗೆ ಲಭ್ಯವಿದೆ ಎಂದು ಪ್ರಕಟಣೆ ತಿಳಿಸಿದೆ.

### ರಾಷ್ಟ್ರೀಯ ವಿಚಾರ ಸಂಕಿರಣ 9ರಿಂದ

**ಬೆಂಗಳೂರು:** ಸಂಸ್ಕೃತಿ ಪ್ರತಿಷ್ಠಾನದ ವತಿಯಿಂದ ರಾಜಾಜಿನಗರದ ಇಸ್ಕಾನ್ ಸಂಸ್ಥೆಯ ಮಲ್ಟಿ ವಿಝುನ್ ಥಿಯೇಟರ್ ಸಭಾಂಗಣದಲ್ಲಿ 'ಭಾರತೀಯ ಚತುಷ್ಷಷ್ಟಿ ಕಲೆಗಳು' ಎಂಬ ರಾಷ್ಟ್ರೀಯ ವಿಚಾರ ಸಂಕಿರಣ ನ.9 ಮತ್ತು 10 ರಂದು ಹಮ್ಮಿಕೊಳ್ಳಲಾಗಿದೆ. ರಾಷ್ಟ್ರೀಯ ವಿಚಾರ ಸಂಕಿರಣಕ್ಕೆ ಕರ್ನಾಟಕ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು ಚಾಲನೆ ನೀಡಲಿದ್ದಾರೆ. ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಮತ್ತು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಭಾಗವಹಿಸಲಿದ್ದಾರೆ. ದೇಶಾದ್ಯಂತ ನುರಿತ ಕಲಾವಿದರು, ತಜ್ಞರು ಹಾಗೂ ವಿದ್ವಾಂಸರು ಭಾಗವಹಿಸಿ ಅವರವರ ಉನ್ನತಸ್ತರದ ವಿಚಾರ ಕೈಚಳಕಗಳನ್ನು ಪ್ರಸ್ತುತಪಡಿಸಲಿದ್ದಾರೆ. ಈ ವಿಚಾರ ಸಂಕಿರಣವು ಸಂಸ್ಕೃತಿ ಸಚಿವಾಲಯದ ರಾಷ್ಟ್ರೀಯ ಸಂಸ್ಕೃತಿ ನಿಧಿಯಿಂದ ಪ್ರಾಯೋಜಿತವಾಗಿದೆ. ವಿಚಾರ ಸಂಕಿರಣದಲ್ಲಿ ಭಾಗವಹಿಸಲು ಆಸಕ್ತರು www.samikshanationalseminar.in ಎಂಬ ಜಾಲತಾಣದಲ್ಲಿ ಹೆಸರು ನೋಂದಾಯಿಸಬಹುದು ಎಂದು ಪ್ರತಿಷ್ಠಾನದ ಟ್ರಸ್ಟಿ ಡಾ.ಎಂ.ಎ.ಆಳ್ವಾರ್ ತಿಳಿಸಿದ್ದಾರೆ.

### ಪಟಾಕಿ ಮಳಿಗೆ ತೆರೆಯಲು ಆಹ್ವಾನ

**ಬೆಂಗಳೂರು:** ನಿಯಮಾನುಸಾರ ಬಿಬಿಎಂಪಿ ಮೈದಾನದಲ್ಲಿ ಚಿಲ್ಲರೆ ಪಟಾಕಿ ಮಳಿಗೆಗಳನ್ನು ತೆರೆಯಲು ಇಚ್ಛಿಸುವ ಸಾರ್ವಜನಿಕರಿಂದ ಅರ್ಜಿ ಆಹ್ವಾನಿಸಲಾಗಿದೆ. ಬೆಂಗಳೂರು ಒನ್ ಕೇಂದ್ರಗಳಲ್ಲಿ ಆನ್ ಲೈನ್ ಮುಖಾಂತರ ನ.6 ರಿಂದ ನ.7ರ ಸಂಜೆ 5 ಗಂಟೆಗೆ ಒಳಗೆ 5 ಸಾವಿರ ರು.ಗಳ ಶುಲ್ಕದೊಂದಿಗೆ ಅರ್ಜಿಯನ್ನು ಸಲ್ಲಿಸಬಹುದಾಗಿದೆ. ಡಿಡಿ ರೂಪದಲ್ಲಿ 25 ಸಾವಿರ ರು.ಗಳನ್ನು ಡೆಪ್ಯುಟಿ ಕಮೀಷನರ್ ಆಫ್ ಪೊಲೀಸ್ ಆಡಳಿತ ಬೆಂಗಳೂರು ನಗರ ಇವರ ಹೆಸರಿನಲ್ಲಿ ಪಡೆದು ಮುಂಗಡ ಠೇವಣಿಯನ್ನು ಆನ್ ಲೈನ್ ಪೋರ್ಟಲ್‌ನಲ್ಲಿ ಅಪ್ ಲೋಡ್ ಮಾಡಬೇಕು. 5 ಸಾವಿರ ಅರ್ಜಿ ಶುಲ್ಕವನ್ನು ಡಿಜಿಪಿ ಮತ್ತು ಡಿಜಿ ಅಗ್ನಿಶಾಮಕ ಮತ್ತು ತುರ್ತು ಸೇವೆ ಇವರ ಹೆಸರಿನಲ್ಲಿ ಡಿಡಿ ಪಡೆದು ಅಪ್‌ಲೋಡ್ ಮಾಡಬೇಕು. ಅರ್ಜಿ ಸಲ್ಲಿಸುವವರ ಹೆಸರಿನಲ್ಲಿಯೇ ಪರವಾನಿಗೆ ನೀಡಲಾಗುವುದು, ಬೇರೆ ಅವರ ಹೆಸರನ್ನು ಪರಿಗಣಿಸುವುದಿಲ್ಲ. ವಾಸ ಸ್ಥಳ, ಆಧಾರ್, ಮತದಾರರ ಗುರುತಿನ ಚೀಟಿಯನ್ನು ಕೂಡ ಲಗತ್ತಿಸಬೇಕು. ಹೆಚ್ಚಿನ ಮಾಹಿತಿಗೆ www. bcp. gov.in ನಲ್ಲಿ ಪಡೆಯ ಬಹುದು.

### 7ನೇ ವೇತನ ಆಯೋಗಕ್ಕೆ 6 ತಿಂಗಳ ವಿಸ್ತರಣೆ

**ಬೆಂಗಳೂರು:** ವೇತನ ಪರಿಷ್ಕರಣೆಯಾಗಿ ಹೆಚ್ಚು ವೇತನ ಸಿಗುವ ಸಂತಸದಲ್ಲಿರುವ ರಾಜ್ಯ ಸರಕಾರಿ ನೌಕರರಿಗೆ ಮತ್ತೆ ನಿರಾಸೆಯಾಗಿದೆ. ಏಳನೇ ವೇತನ ಆಯೋಗದ ಗಡುವನ್ನು ಆರು ತಿಂಗಳ ಕಾಲ ವಿಸ್ತರಣೆ ಮಾಡಿ ಸರಕಾರ ಆದೇಶಿಸಿದೆ. ಇದರಿಂದ ಇನ್ನೇನು ವೇತನ ಹೆಚ್ಚಳವಾಗಲಿದೆ ಎಂದು ಭಾವಿಸಿದ್ದ ಲಕ್ಷಾಂತರ ಸರಕಾರಿ ನೌಕರರು ಮತ್ತೆ ಕೆಲ ತಿಂಗಳ ಕಾಲ ಕಾಯಬೇಕಾಗಿದೆ. ರಾಜ್ಯ ಸರಕಾರಿ ನೌಕರರ ವೇತನ, ಭತ್ಯೆ ಪರಿಷ್ಕರಣೆಗೆ ಬಿಜೆಪಿ ಸರಕಾರವು 2022 ರ ನವೆಂಬರ್ 19 ರಂದು ಒಂದು ಆಯೋಗವನ್ನು ರಚನೆ ಮಾಡಿತ್ತು. ನಿವೃತ್ತ ಮುಖ್ಯ ಕಾರ್ಯದರ್ಶಿ ಸುಧಾಕರ್ ರಾವ್ ಅಧ್ಯಕ್ಷತೆಯಲ್ಲಿ ಈ ಆಯೋಗ ರಚನೆಯಾಗಿತ್ತು. 6 ತಿಂಗಳಲ್ಲಿ ವರದಿ ನೀಡುವಂತೆ ಆಯೋಗಕ್ಕೆ ಸೂಚನೆ ನೀಡಲಾಗಿತ್ತು. ನವೆಂಬರ್ 19 ಕ್ಕೆ ಆಯೋಗದ ಅವಧಿ ಅಂತ್ಯವಾಗಲಿದೆ.

ಪದವೀಧರ ಕ್ಷೇತ್ರದಲ್ಲಿ ಹಳಬರಿಗೆ ಇನ್ನೆಷ್ಟು ಅವಕಾಶ? | ಕಮಲ ಪಾಳಯದಲ್ಲಿ ಹೊಸ ಪ್ರಶ್ನೆ

# ಅವಕಾಶದ ನಿರೀಕ್ಷೆಯಲ್ಲಿ ಹೊಸಬರು

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ರಾಜ್ಯ ವಿಧಾನಸಭಾ ಚುನಾವಣೆಯ ಸೋಲಿನ ಬಳಿಕ ನಾಯಕತ್ವದ ಕೊರತೆ ಎದುರಿಸುತ್ತಿರುವ ರಾಜ್ಯ ಬಿಜೆಪಿಯಲ್ಲಿ ಈಗ ವಿಧಾನ ಪರಿಷತ್ ಚುನಾವಣೆಗೆ ಸಿದ್ಧತೆ ಆರಂಭವಾಗಿದ್ದು, ಪ್ರತಿಬಾರಿಯಂತೆ ಹಳೆ ತಲೆಗಳಿಗೆ ಅವಕಾಶ ನೀಡುವ ಬದಲು ಹೊಸ ಮುಖಗಳಿಗೆ ಅವಕಾಶ ನೀಡಬೇಕು ಎನ್ನುವ ವ'ಾತ'ುಗ'ಳ'ು ಜೋರಾಗಿದೆ.



ಬೆಂಗಳೂರರು ಪದವಿಧರ, ಬೆಂಗಳೂರು ಶಿಕ್ಷಕ ಸೇರಿದಂತೆ ಒಟ್ಟು ಏಳು ಸ್ಥಾನಗಳಿಗೆ ಮುಂದಿನ ಜೂನ್ ತಿಂಗಳಲ್ಲಿ ಚುನಾವಣೆ ನಡೆಯಲಿದೆ. ಹಲವು ವರ್ಷ ಗಳಿಂದ ಈ ಚುನಾವಣೆಯಲ್ಲಿ ಸ್ಪರ್ಧಿಸುತ್ತಿರುವವರಿಗೆ ಅವಕಾಶ ನೀಡಿರುವುದರಿಂದ, ಹಳಬರಿಗೆ ನೀಡುವ ಬದಲು ಹೊಸಬರಿಗೆ ಅವಕಾಶ ನೀಡಬೇಕು ಎನ್ನುವ ಒತ್ತಡ ಜೋರಾಗಿದೆ.

ವಿಧಾನಸಭಾ ಚುನಾವಣೆಯಲ್ಲಿ ಹೊಸ ಪ್ರಯೋಗ ನಡೆಸಿರುವ ಬಿಜೆಪಿ ನಾಯಕರು ಈ ಬಾರಿ ಮೇಲ್ಮನೆ ಚುನಾವಣೆಯಲ್ಲೂ ಹಿರಿಯರಿಗೆ ಮನೆಯ ದಾರಿ ತೋರಿಸಬೇಕು. ಆಗಷ್ಟೆ ಮೇಲ್ಮನೆಯಲ್ಲಿ ಹೊಸ ನಾಯಕತ್ವ ಬರಲು ಸಾಧ್ಯ. ಈಗಿರುವ ವಿಧಾನ ಪರಿಷತ್ ಸದಸ್ಯರ ಪೈಕಿ ಬಹುತೇಕರು ಎಲ್ಲರಿಗೂ ಒಳ್ಳೆಯವರಾ ಗಿರಬೇಕೆಂಬ ಧೋರಣೆಗೆ ವಾಲುತ್ತಿದ್ದು, ಸರಕಾರದ ನಿಲುವನ್ನು ಪ್ರಶ್ನಿಸಲು ಸಾಧ್ಯವಾಗುತ್ತಿಲ್ಲ. ಮೇಲ್ಮನೆಯಲ್ಲಿ ಗುಣಮಟ್ಟದ ಚರ್ಚೆಯೂ ಸಾಧ್ಯವಾಗುತ್ತಿಲ್ಲ. ಇದೆಲ್ಲದಕ್ಕೂ ಬದಲಾವಣೆ ತರಬೇಕಿದ್ದರೆ ಹೊಸಬರಿಗೆ ಅವಕಾಶ ನೀಡಬೇಕೆಂದು ಒತ್ತಾಯಿಸಲಾಗುತ್ತಿದೆ.

ಬೆಂಗಳೂರು ಪದವಿಧರ ಕ್ಷೇತ್ರಕ್ಕೆ ಈಗಿರುವ ಹಾಲಿ ವಿಧಾನ ಪರಿಷತ್ ಸದಸ್ಯ ಅ.ದೇವೇಗೌಡ ಈ ಬಾರಿಯೂ ಉಮೇದುವಾರಿಕೆ ತೋರಿದ್ದಾರೆ. ಆದರೆ ಅವರಿಂದ ಪಕ್ಷಕ್ಕೆ ಯಾವುದೇ ಲಾಭವಾಗಿಲ್ಲ ಎನ್ನುವುದು ಪಕ್ಷದ ಕಾರ್ಯಕರ್ತರ ಮಾತಾಗಿದೆ. ನೋಂದಣಿ ಮಾಡಿಸಿ ಟೇಬಲ್ ಹಾಕಿ ಗೆಲ್ಲಿಸಿದ ಬೆಂಬಲಿಗರಿಗೂ ಯಾವ ಲಾಭವಾಗಿಲ್ಲ. ಸದನದಲ್ಲಿ ಪದವೀಧರರ ಸಮಸ್ಯೆ ಬಗ್ಗೆ ಯೂ ಧ್ವನಿ ಎತ್ತಿಲ್ಲ. ಹಲವು ಬಾರಿ ಒಂದು ಅವಕಾಶಕ್ಕಾಗಿ ಮನವಿ ಮಾಡಿದ ಪಕ್ಷ ನಿಷ್ಠ ಕಾರ್ಯಕರ್ತರನ್ನು ಕಡೆಗಣಿಸಿ ಹೊರಗಿನಿಂದ ಬಂದವರಿಗೆ ಮಣೆಹಾಕಿದ್ದರಿಂದ ಪಕ್ಷಕ್ಕೆ ಆದ ಲಾಭವಾದರೂ ಏನು? ಕರೆತಂದವರು ಸಾಧಿಸಿದ್ದಾದರೂ ಏನು? ಇನ್ನಾದರೂ ಪಕ್ಷದ ವರಿಷ್ಠ ನಾಯಕರು ಪಕ್ಷಕ್ಕಾಗಿ ದುಡಿದ ಪಕ್ಷದ ಯುವಕರಿಗೆ ಆದ್ಯತೆಯನ್ನು ನೀಡಲಿ ಎನ್ನುವುದು ಬಿಜೆಪಿ ಪಕ್ಷದ ಪಡಸಾಲೆಯಲ್ಲಿನ ಚರ್ಚೆಯಾಗಿದೆ.

### ಮತದಾನದ್ದೇ ಸಮಸ್ಯೆ

**ಬೆಂಗಳೂರು ಪದವಿಧರ ಕ್ಷೇತ್ರವನ್ನು ಪರಿಗಣಿಸಿದರೆ ಸುಮಾರು 60 ಲಕ್ಷಕ್ಕೂ ಮೇಲ್ಪಟ್ಟು ಮತದಾರರ ನೊಂದಣಿಗೆ ಅವಕಾಶವಿದೆ. ಆದರೆ ಮೂಲಗಳ ಪ್ರಕಾರ ಈ ನೊಂದಣಿ ಹದಿನೈದರಿಂದ ಇಪ್ಪತ್ತು ಸಾವಿರದೊಳಗೆ ನಿಲ್ಲುತ್ತಿದೆ. ಈ ಪೈಕಿ ಅರ್ಧದಷ್ಟು ಮತದಾನವಾದರೆ ಸಾಕು ಎಂಬ ಧೋರಣೆಯಲ್ಲಿ ಬಹುತೇಕರಿದ್ದಾರೆ. ಹೀಗಾಗಿ ಪದವಿಧರ ಕ್ಷೇತ್ರದ ಮತದಾರರ ನೋಂದಣಿಯಲ್ಲಾಗಲಿ, ಹೊಸ ಮುಖಗಳನ್ನು ಅಖಾಡಕ್ಕೆ ತರುವುದಕ್ಕಾಗಲಿ ಸಾಧ್ಯವಾಗುತ್ತಿಲ್ಲ. ಹೀಗಾಗಿ ಈ ಬಾರಿ ಏಳು ಕ್ಷೇತ್ರಗಳಲ್ಲಿ ಹೊಸಬರಿಗೆ ಮಣೆ ಹಾಕಲಿ ಎಂಬ ಆಗ್ರಹ ಕೇಳಿ ಬಂದಿದೆ.**

- ಹಾಲಿ ವಿಧಾನ ಪರಿಷತ್ ಸದಸ್ಯ ಅ.ದೇವೇಗೌಡ ಈ ಬಾರಿಯೂ ಉಮೇದುವಾರಿಕೆ
- ಅವರಿಂದ ಪಕ್ಷಕ್ಕೆ ಯಾವುದೇ ಲಾಭವಾಗಿಲ್ಲ ಎನ್ನುವುದು ಪಕ್ಷದ ಕಾರ್ಯಕರ್ತರ ವಾದ
- ನೋಂದಣಿ ಮಾಡಿಸಿ ಟೇಬಲ್ ಹಾಕಿ ಗೆಲ್ಲಿಸಿದ ಬೆಂಬಲಿಗರಿಗೂ ಯಾವ ಲಾಭವಾಗಿಲ್ಲ
- ಇನ್ನಾದರೂ ಪಕ್ಷದ ವರಿಷ್ಠರು ಪಕ್ಷಕ್ಕಾಗಿ ದುಡಿದ ಪಕ್ಷದ ಯುವಕರಿಗೆ ಆದ್ಯತೆ ನೀಡಲಿ

## ಖುಷಿ ಪಡಲು ಕಾರಣಗಳನ್ನು ಹುಡುಕೋಣ: ಲಕ್ಷ್ಮಣರಾವ್

**ಬೆಂಗಳೂರು:** ಸಂತೋಷ ಪಡಲು ನಾವೇ ಕಾರಣಗಳನ್ನು ಹುಡುಕಿಕೊಳ್ಳಬೇಕು ಎಂದು ಸಾಹಿತಿ ಬಿ.ಆರ್.ಲಕ್ಷ್ಮಣರಾವ್ ಸಲಹೆ ನೀಡಿದರು.

ನ್ಯಾಷನಲ್ ಕಾಲೇಜು ಡಾ.ಎಚ್.ಎನ್. ಮಲ್ಟಿಮಿಡಿಯಾ ಸಭಾಂಗಣದಲ್ಲಿ ಸಂಗೀತ ಧಾಮ ಮ್ಯೂಸಿಕ್ ಅಕಾಡೆಮಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಖುಷಿ ಪಡಲು ಕಾರಣ ಶೈಲೇಶ್ ಪಟವರ್ಧನ್ ಅವರ ಚೊಚ್ಚಲ ಕವನ ಸಂಕಲನ ಬಿಡುಗಡೆಗೊಳಿಸಿ ಮಾತನಾಡಿ, ಸಾಕಷ್ಟು ಸಂದರ್ಭಗಳಲ್ಲಿ ಖುಷಿ ಪಡದೇ ಕಾಲ ಕಳೆದಿರುವಂತಹ ಸನ್ನಿವೇಶಗಳಿವೆ. ಆದರೆ ಈಗಾಗುವುದು ಬೇಡ. ಸಮಯಕ್ಕೆ ಅನುಗುಣವಾಗಿ ಕೆಲ ವಿಷಯಗಳಲ್ಲಿ ಸಂತೋಷ ಪಡಲು ಮುಂದಾಗಬೇಕು. ಶೈಲೇಶ್ ಪಟವರ್ಧನ್ ಮತ್ತು ಮೃತ್ಯುಂಜಯ ದೊಡ್ಡವಾಡ ಎಂಬ ಜೋಡಿ ತುಂಬ ಸೊಗಸಾಗಿ ಖುಷಿ ಪಡಲು ಕಾರಣ ಎಂಬ ಕವನ ಸಂಕಲನ ಹೊರ ತಂದು ಆ ಮೂಲಕ ಅದರ ಕೆಲವು ಕವನಗಳನ್ನು ಕವಿತೆಗಳ ಮೂಲಕ ಧ್ವನಿ ಸುರುಳಿಯಂತೆ ಹೊರ ತಂದಿರುವುದು ಅದ್ವಿತೀಯ ಕಾರ್ಯ ಎನ್ನಬಹುದಾಗಿದೆ ಎಂದು ತಿಳಿಸಿದರು.

ಬೆಂಗಳೂರು ದೂರದರ್ಶನದ ನಿರ್ದೇಶಕಿ ಡಾ.ನಿರ್ಮಲಾ ಯಲಿಗಾರ್ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿ, ಕನ್ನಡದ ಕವಿಗಳು ಬರೆದಂತಹ ಸಾಹಿತ್ಯ, ಕವನ, ಪದ್ಯಗಳನ್ನು ಜಾನಪದಗೀತೆ, ಭಾವಗೀತೆ ಹಾಗೂ ಇತರೆ ಗೀತೆಗಳಂತೆ ಹಾಡಲು ಪ್ರಥಮವಾಗಿ ಆಕಾಶವಾಣಿ ನಾಂದಿಯಾಡಿದ್ದು ಎಂಬುದನ್ನು ಮರೆಯುವಂತಿಲ್ಲ. ಇಂತಹ ಗೀತೆಗಳನ್ನು ಕೇಳುವವರ ಸಂಖ್ಯೆ ಕೂಡ ಕಡಿಮೆಯಾಗುತ್ತಿದೆ ಎಂದರು.

> ಕುವೆಂಪು, ಬೇಂದ್ರೆ, ಕೆ.ಎಸ್.ನರಸಿಂಹಸ್ವಾಮಿ ಹಾಗೂ ಇತರೆ ಅನೇಕ ಕನ್ನಡದ ಕವಿಗಳು ಕವನ, ಪದ್ಯಗಳನ್ನು ಬರೆದಿದ್ದಾರೆ. ಆದರೆ ಇವುಗಳು ಭಾವಗೀತೆಗಳಾಗಿ ಹಾಡುವುದಕೋಸ್ಕರವಾಗಿ ಬರೆಯಲಿಲ್ಲ, ಕಾಲ ಕ್ರಮೇಣವಾಗಿ ಇಂತಹವುಗಳು ಭಾವಗೀತೆಗಳಾಗಿ ರೂಪ ಪಡೆದಿದ್ದು ವಿಶೇಷವೇ ಸರಿ. ಭಾವಗೀತೆಗಳು ಅಂದು ಇಂದು ಎಂದಿಗೂ ಹಾಡಿನ ರೂಪ ಪಡೆದುಕೊಳ್ಳುತ್ತಾ ಸಾಗಿರುವುದು ಮೆಚ್ಚುವಂತಹ ಸಂಗತಿ. ಈ ಭಾವಗೀತೆಗಳು ಮನುಷ್ಯನ ಎಂತಹ ದುಗುಡ-ದುಮ್ಮಾನಗಳನ್ನು ದೂರ ಮಾಡುವ ಶಕ್ತಿಹೊಂದಿವೆ.
>
> -ಡಾ.ನಿರ್ಮಲಾ ಯಲಿಗಾರ್

ಬಫರ್ ವಲಯಗಳಲ್ಲಿನ ಖಾಲಿ ನಿವೇಶನಗಳಲ್ಲಿ ಅನೈತಿಕ ಚಟುವಟಿಕೆ

# ಖಾಲಿ ಸೈಟ್ ನಿರ್ವಹಣೆ ಮಾಡದಿದ್ದರೆ ದಂಡ

**ಬೆಂಗಳೂರು:** ಬಿಬಿಎಂಪಿ ವ್ಯಾಪ್ತಿಯಲ್ಲಿ ಖಾಲಿ ನಿವೇಶನಗಳನ್ನು ಸ್ವಚ್ಛವಾಗಿಟ್ಟು ಕೊಳ್ಳದೇ ಇದ್ದಲ್ಲಿ ನಿವೇಶನ ಮಾಲೀಕರಿಗೆ ದಂಡ ವಿಧಿಸಲು ಬಿಬಿಎಂಪಿ ಸಜ್ಜಾಗಿದೆ.

ಬೆಂಗಳೂರು ನಗರದಲ್ಲಿ ಹಲವಾರು ಖಾಲಿ ನಿವೇಶನಗಳಿದ್ದು ಅದರಲ್ಲಿ ಕಸದ ರಾಶಿ ಇರುವುದರು ಮಾತ್ರವಲ್ಲದೆ ಗಿಡಗಂಟೆಗಳು ಬೆಳೆದು ಜಂತುಗಳು ಸೇರಿಕೊಳ್ಳುತ್ತಿವೆ. ಇದರಿಂದ ಅಕ್ಕಪಕ್ಕದವರಿಗೆ ತೊಂದರೆಯಾಗುತ್ತಿರುವುದರಿಂದ ಬಿಬಿಎಂಪಿ ಖಾಲಿ ನಿವೇಶನದ ಮಾಲೀಕರಿಗೆ ದಂಡ ಪ್ರಯೋಗ ಮಾಡು ಮುಂದಾಗಿದೆ. ಕಳೆದ ವಾರ ಕೂಡ್ಲುಗೇಟ್ ಬಳಿ ಖಾಲಿ ನಿವೇಶನದಲ್ಲಿ ಚಿರತೆ ಅವಾಂತರವನ್ನು ಸೃಷ್ಟಿಸಿತ್ತು. ಅರಣ್ಯ ಸಿಬ್ಬಂದಿಯ ಮೂವರ ಮೇಲೆ ದಾಳಿ ಮಾಡಿದ್ದು. ಈ ಪ್ರದೇಶದಲ್ಲಿ ಚಿರತೆ ಕಾಣಿಸಿಕೊಳ್ಳಲು ಅಲ್ಲಿನ ಖಾಲಿ ನಿವೇಶನದಲ್ಲಿ ಗಿಡಗಂಟೆಗಳು ಆಳುದ್ದ ಬೆಳೆದಿದ್ದುದೇ ಕಾರಣವೆಂದು ತಜ್ಞರು ಹೇಳಿದ್ದರು. ಇದೇ ರೀತಿ ಹಾವು, ಹೆಗ್ಗಣಗಳ ಕಾಟವೂ ಹೆಚ್ಚುತ್ತಿದೆ. ಇಂತಹ ಖಾಲಿ ನಿವೇಶನ ಇರುವ ಪ್ರದೇಶಗಳಲ್ಲಿ ವಾರಕ್ಕೆ ಮೂರ್‍ನಾಲ್ಕು ಮಂದಿ ಹಾವಿನ ಬಗ್ಗೆ ಬಿಬಿಎಂಪಿಗೆ ದೂರು ನೀಡುತ್ತಿದ್ದಾರೆ. ಇದರಿಂದ ಖಾಲಿ ನಿವೇಶನಗಳನ್ನು ಸ್ವಚ್ಛವಾಗಿಟ್ಟುಕೊಳ್ಳುವಂತೆ ಮಾಲೀಕರಿಗೆ ಸೂಚಿಸಲಾಗುತ್ತಿದೆ.

### ಹಳೇ ನಿಯಮಾವಳಿಗೆ ತಿದ್ದುಪಡಿ

**2019ರಲ್ಲಿ ಖಾಲಿ ಸೈಟ್ ನಿರ್ವಹಣೆ ಮಾಡದೇ ಬಿಡುವ ಮಾಲೀಕರ ಸೈಟ್‌ಗಳನ್ನು ಬಿಬಿಎಂಪಿಯೇ ನಿರ್ವಹಣೆ ಮಾಡುತ್ತಿತ್ತು. ಈ ನಿರ್ವಹಣೆಗೆ ಬಿಬಿಎಂಪಿ ದಂಡವನ್ನು ವಸೂಲಿ ಮಾಡುತ್ತಿತ್ತು. ಆದರೆ ಈ ಕುರಿತಾಗಿ ವಿರೋಧ ವ್ಯಕ್ತವಾಗಿ, ಇದು ಕೆಎಂಸಿ ಆಕ್ಟ್‌ನಲ್ಲಿ ಇಂತಹ ಕಾಯಿದೆಯಿಲ್ಲ ಎನ್ನುವ ವಿವಾದ ಶುರುವಾಗಿತ್ತು. ಚಿರತೆ ದಾಳಿ ಹಿನ್ನೆಲೆಯಲ್ಲಿ ಹಳೆಯ ಆದೇಶವನ್ನೇ ಮತ್ತೆ ಜಾರಿಗೆ ತಂದು ಖಾಲಿ ನಿವೇಶನದಲ್ಲಿ ಬೆಳೆದಿರುವ ಗಿಡಗಂಟೆಗಳನ್ನು ತೆರವು ಮಾಡಿ ಅದಕ್ಕೆ ತಗುಲಿದ ವೆಚ್ಚವನ್ನು ನಿವೇಶನ ಮಾಲೀಕರಿಂದ ವಸೂಲಿ ಮಾಡುವುದಲ್ಲದೆ, ಖಾಲಿ ನಿವೇಶನವನ್ನು ನಿರ್ವಹಣೆ ಮಾಡದೆ ಕಸದ ರಾಶಿಗೆ ಕಾರಣವಾಗಿದ್ದು ಮತ್ತು ಗಿಡಗಂಟೆಗಳು ಬೆಳೆದು ಹಾವುಗಳ ಆವಾಸ ಸ್ಥಾನವಾಗಲು ಕಾರಣವಾಗುತ್ತಿದೆ.**




ಬೆಂಗಳೂರಿನ ಗಾಯನ ಸಮಾಜದಲ್ಲಿ 53ನೇ ಸಂಗೀತ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಶ್ರೀ ಕಲಾ ಜ್ಯೋತಿಯವರು ಕಲಾವಿದರಿಗೆ ಶ್ರೀ ಯದುಗಿರಿ ಯತಿರಾಜ ನಾರಾಯಣ ರಾಮಾನುಜ ಜೀಯರ್, ಡಾ.ವಿದ್ಯಾಭೂಷಣ, ಎಚ್.ಕೆ.ನರಸಿಂಹ ಮೂರ್ತಿ ಮತ್ತು ಇತರರು ಇದ್ದರು.

# 50 ಬಿಜೆಪಿ ಶಾಸಕರು ಕಾಂಗ್ರೆಸ್‌ಗೆ ಬರಲು ಸಿದ್ಧ

**ಬೆಂಗಳೂರು:** ಬಿಜೆಪಿಯ 50 ಶಾಸಕರು ಕಾಂಗ್ರೆಸ್‌ಗೆ ಬರಲು ಸಿದ್ಧವಾಗಿದ್ದಾರೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ. ಕಾಂಗ್ರೆಸ್‌ನ 50 ಜನ ಬಿಜೆಪಿ ಹೈಕಮಾಂಡ್ ಜೊತೆಗೆ ಸಂಪರ್ಕದಲ್ಲಿದ್ದೆ ಎಂಬ ಮುರಗೇಶ್ ನಿರಾಣಿ ಹೇಳಿಕೆಗೆ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯೆ ನೀಡಿದ ಅವರು, ನಮ್ಮ ಪಕ್ಷದ ಯಾವುದೇ ಶಾಸಕರು ಬಿಜೆಪಿಗೆ ಹೋಗುವುದಿಲ್ಲ, ಆದರೆ, ಬಿಜೆಪಿಯ 50 ಶಾಸಕರು ಕಾಂಗ್ರೆಸ್‌ಗೆ ಬರುವುದಾಗಿ ಹೇಳಿದ್ದಾರೆ ಎಂದು ತಿರುಗೇಟು ನೀಡಿದರು.

ಲೋಕಸಭೆ ಚುನಾವಣೆಗೆ ಮೈತ್ರಿ ಮಾಡಿಕೊಂಡಿರುವ ಬಿಜೆಪಿ-ಜೆಡಿಎಸ್ ಲೋಕಸಭೆ ಚುನಾವಣೆ ಬಳಿಕ ಬಿಜೆಪಿ, ಜೆಡಿಎಸ್‌ನಲ್ಲಿ ಯಾರೂ ಉಳಿಯುವುದಿಲ್ಲ. ಹಲವು ಶಾಸಕರು ಕಾಂಗ್ರೆಸ್‌ಗೆ ಬರಲು ಸಿದ್ಧತೆ ನಡೆಸಿದ್ದಾರೆ. 5 ತಿಂಗಳು ಕಾಲಾವಕಾಶ ಕೊಡುತ್ತೇವೆ. 50 ಶಾಸಕರನ್ನು ಕರೆದುಕೊಂಡು ಹೋಗಲಿ ನೋಡೋಣ ಎಂದು ಅವರು ಬಿಜೆಪಿಗೆ ಸವಾಲು ಹಾಕಿದರು. ಮೊದಲು ಬಿಜೆಪಿಯವರು ನಾಯಕನ ಆಯ್ಕೆ ಸೇರಿದಂತೆ ಎಲ್ಲಾ ಸಮಸ್ಯೆ ಸರಿ ಮಾಡಿಕೊಂಡು ಬೆಳಗಾವಿ ಅಧಿವೇಶನಕ್ಕೆ ಬರಲಿ. ಅಲ್ಲಿಯೇ ಅವರ ಆರೋಪಗಳಿಗೆ ಉತ್ತರ ನೀಡಲಾಗುತ್ತದೆ ಎಂದು ವಾಗ್ದಾಳಿ ನಡೆಸಿದರು.

ಸ್ಪರ್ಧೆಯಲ್ಲಿ ರಾಜ್ಯದ 80 ಕೇಂದ್ರಗಳಿಂದ 3800ಕ್ಕೂ ಹೆಚ್ಚು ಮಕ್ಕಳು ಭಾಗಿ

# ಅಬಾಕಸ್‌ನಿಂದ ಏಕಾಗ್ರತೆಯೂ ಹೆಚ್ಚಳ

**ಬೆಂಗಳೂರು:** ಅಬಾಕಸ್ ಕಲಿಸುವಾಗ ಕೇವಲ ಗಣಿತ ಮಾತ್ರವಲ್ಲದೇ, ಮಕ್ಕಳಲ್ಲಿ ಒಟ್ಟಾರೆಯ ಏಕಾಗ್ರತೆಯೂ ಬೆಳೆಯುತ್ತದೆ. ಆದ್ದರಿಂದ ಮಕ್ಕಳಲ್ಲಿ ಒಟ್ಟಾರೆ ಬೆಳವಣಿಗೆಗೆ ಅಬಾಕಸ್ ಪೂರಕವಾಗುತ್ತದೆ ಎಂದು ಸಿಪ್ ಅಬಾಕಸ್ ಸಂಸ್ಥೆಯ ಕರ್ನಾಟಕದ ಮುಖ್ಯಸ್ಥ ನರೇಂದ್ರ ಎಚ್.ಎನ್. ಹೇಳಿದರು.

ನಂದಿ ಲಿಂಕ್ ಗ್ರೌಂಡ್‌ನಲ್ಲಿ ಹಮ್ಮಿಕೊಂಡಿದ್ದ ಸಿಪ್ ಪ್ರೊಡಿಸಿ ಸ್ಪರ್ಧೆಯ ವೇಳೆ ಮಾತನಾಡಿದ ಅವರು, ಅನೇಕ ಮಕ್ಕಳಿಗೆ ಕಬ್ಬಿಣದ ಕಡಲೆಯಾಗಿರುವ ಗಣಿತವನ್ನು ಸುಲಭ ರೀತಿಯಲ್ಲಿ ಕಲಿಸುವುದು ಅಬಾಕಸ್‌ನ ಉದ್ದೇಶ. ಆದರೆ ಕೇವಲ ಅದಷ್ಟೇ ಅಲ್ಲದೇ, ನಮ್ಮ ತರಬೇತಿಯ ವೇಳೆ ನಾವು ಮಕ್ಕಳಿಗೆ ಏಕಾಗ್ರತೆಯನ್ನು ಕಲಿಸುತ್ತೇವೆ. ಇದರಿಂದಾಗಿ ಮಕ್ಕಳಿಗೆ ಕೇವಲ ಗಣಿತ ಮಾತ್ರವಲ್ಲದೇ, ಎಲ್ಲ ವಿಷಯಗಳಲ್ಲಿಯೂ ಸಹಾಯವಾಗುತ್ತದೆ. ಇದರಿಂದ ಶಾಲೆಗಳಲ್ಲಿ ಶಿಕ್ಷಕರು ಯಾವ ವಿಷಯದ ಬಗ್ಗೆ ಪಾಠ ಮಾಡಿದರೂ, ಅದನ್ನು ಸುಲಭವಾಗಿ ಅರ್ಥೈಸಿಕೊಳ್ಳುವ ಸಾಮರ್ಥ್ಯ ಮಕ್ಕಳಿಗೆ ಬರುತ್ತದೆ. ಕೇವಲ ಪಠ್ಯ ಮಾತ್ರವಲ್ಲದೇ, ಕ್ರೀಡೆ, ಕಲೆ, ಸಂಸ್ಕೃತಿಯ ಸಮಯದಲ್ಲಿಯೂ ಈ ಏಕಾಗ್ರತೆ ಮಕ್ಕಳ ಸಹಾಯಕ್ಕೆ ಬರಲಿದೆ ಎಂದು ಹೇಳಿದರು. ಅನೇಕರಿಗೆ ಗಣಿತ ಎನ್ನುವುದು ಕಬ್ಬಿಣದ ಕಡಲೆಯಾಗಿರುತ್ತದೆ. ಏಕೆಂದರೆ ಸಾಂಪ್ರದಾಯಿಕವಾಗಿ ನಾವು ಗಣಿತವನ್ನು ಕೇವಲ ಕಾಲ್ಪನಿಕ ಅಂಕಿಗಳ ಮೇಲೆ ಕಲಿಸುತ್ತೇವೆ. ಆದರೆ ಅಬಾಕಸ್‌ನಲ್ಲಿ ಮಕ್ಕಳಿಗೆ ಮಣಿಗಳನ್ನು ತೋರಿಸಿ ಕಲಿಸುತ್ತೇವೆ. ಸಾಂಪ್ರದಾಯಿಕವಾಗಿ ಮಕ್ಕಳು ಸಂಖ್ಯೆಯನ್ನು ಅನುಭವಿಸಲು ಆಗುವುದಿಲ್ಲ. ಆದರೆ ನಾವು ನೀಡುವ ಮಣಿಯನ್ನು ಮಕ್ಕಳು ಮುಟ್ಟಬಹುದು, ಅನುಭವಿಸಬ ಹುದು. ಅದರಿಂದ ಮಕ್ಕಳಿಗೆ ಅಬಾಕಸ್ ಮೂಲಕ ಗಣಿತವನ್ನು ಕಲಿಯುವುದು ಸುಲ ಭವಾಗುತ್ತದೆ ಎಂದು ಅಭಿಪ್ರಾಯಪಟ್ಟರು. ಭಾನುವಾರ ನಡೆದ ಸ್ಪರ್ಧೆಯಲ್ಲಿ ರಾಜ್ಯದ 80 ಕೇಂದ್ರಗಳಿಂದ 3800ಕ್ಕೂ ಹೆಚ್ಚು ಮಕ್ಕಳು ಭಾಗವಹಿಸಿದ್ದರು. ಬೆಳಗ್ಗೆಯಿಂದ ನಡೆದ ವಿವಿಧ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ನೀಡಲಾಯಿತು. ಇದರೊಂದಿಗೆ ಅಬಾಕಸ್ ಕೋರ್ಸ್‌ಗಳನ್ನು ಪೂರ್ಣಗೊಳಿಸಿದವರಿಗೆ ಪ್ರಶಸ್ತಿ ಪತ್ರವನ್ನು ನೀಡಲಾಯಿತು.




ನಂದಿ ಲಿಂಕ್ ಗ್ರೌಂಡ್‌ನಲ್ಲಿ ಹಮ್ಮಿಕೊಂಡಿದ್ದ ಸಿಪ್ ಪ್ರೊಡಿಸಿ ಸ್ಪರ್ಧೆಯಲ್ಲಿ ವಿಜೇತ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪತ್ರ ನೀಡಲಾಯಿತು.

> ಕರೋನಾ ಸಮಯದಲ್ಲಿ ಸಿಪ್ ಸಂಸ್ಥೆಯೇ ಮೊದಲಿಗೆ ಆನ್‌ಲೈನ್ ತರಗತಿಯನ್ನು ಆರಂಭಿಸಿದೆವು. ಇದರಿಂದ ಅನೇಕರಿಗೆ ಸಹಾಯವಾಯಿತು. ಸದ್ಯ 80 ಕೇಂದ್ರಗಳನ್ನು ಆರಂಭಿಸಲಾಗಿದ್ದು, ಮುಂದಿನ ವರ್ಷದ ವೇಳೆಗೆ ಈ ಸಂಖ್ಯೆಯನ್ನು 150ಕ್ಕೂ ಹೆಚ್ಚು ಕೇಂದ್ರವನ್ನು ಆರಂಭಿಸುವ ಗುರಿಯಿದೆ. ಇದರಿಂದ ಸಾವಿರಾರು ಮಕ್ಕಳಿಗೆ ಸಹಾಯವಾಗಲಿದೆ.
>
> – ಎಚ್.ಎನ್.ನರೇಂದ್ರ, ಸಿಪ್, ಕರ್ನಾಟಕ ಮುಖ್ಯಸ್ಥರು

